# ಕೂದಲು ಹೋಗುತ್ತೆ, ಬರೊಲ್ಲ...

ಆಂಟಿ ಆಶ್ಚರ್ಯದಿಂದ ‘ಯಾರನ್ನ ಹುಡುಗ ಅಂದುಕೊಂಡಿದ್ದೀಯ?’ ಎಂದಾಗ, ಅಡುಗೆ ಮನೆಯಿಂದಲೇ ಕೈ ತೋರಿಸುತ್ತಾ, ‘ಅವರಲ್ಲವ’ ಎಂದೆ. ಆಂಟಿ ನಕ್ಕು, ‘ಅಯ್ಯೋ ಅವನಲ್ಲ ಕಣೆ, ಪಕ್ಕದಲ್ಲಿ ಸ್ವಲ್ಪ ಬಾಂಡ್ಲಿ ಕೂತಿದೆಯಲ್ಲ ಅವನು’ ಎಂದು ಸುಲಭವಾಗಿ ಗುರುತು ಹಿಡಿಯಲು ಸಹಾಯ ಮಾಡಿಬಿಟ್ಟರು.

■ ಸಮತಾ.ಆರ್

ನನ್ನ ಮದುವೆಯಾದ ಹೊಸತು. ಒಂದು ಚಿಕ್ಕ ಮನೆಯಲ್ಲಿ ನಮ್ಮಿಬ್ಬರ ಬಿಡಾರ. ಇನ್ನೂ ಮನೆಗೆ ಬೇಕಾದ ವಸ್ತುಗಳನ್ನೆಲ್ಲ ತೊಗೊಂಡಿರಲಿಲ್ಲ. ಇರೋ ಇಬ್ಬರಿಗೆ ಏನು ಮಹಾ ವ್ಯವಸ್ಥೆಗಳು ಬೇಕು. ಅಡುಗೆಗೆ ಒಂದು ಮಿಕ್ಸಿ, ಒಂದು ಗ್ಯಾಸ್ ಸ್ಟೋವ್ ಮತ್ತು ಒಂದಷ್ಟು ಪಾತ್ರೆಗಳು. ಸ್ನಾನಕ್ಕೆ ನೀರು ಕಾಯಿಸುವುದು ಕೂಡ ಅಡುಗೆ ಮನೆ ಸ್ಟೌನಲ್ಲೇ. ಬಟ್ಟೆ ಇಡಲು ಒಂದು ಬೀರು, ಮಲಗಲು ಒಂದು ಮಂಚ, ಯಾರಾದರೂ ಬಂದರೆ ಕೂರಲು ನಾಲ್ಕು ಕುರ್ಚಿ ಇವಿಷ್ಟೇ ನಮಗಿದ್ದ ಆಸ್ತಿ. ಆದರೆ ಆಗ ಇದ್ದ ಸುಖ ಸಂತೋಷ ಮಾತ್ರ ಅಳತೆಗೆ ಸಿಗದಷ್ಟು.

ಆ ದಿನಗಳಲ್ಲಿ ಒಂದು ಭಾನುವಾರದ ದಿನ ಇವರು ಸ್ನಾನಕ್ಕೆ ನೀರು ಕಾಯಲು ಇಟ್ಟವರು, ‘ನೋಡೇ ಇಪ್ಪತ್ತು ನಿಮಿಷ ಬಿಟ್ಟು ಮರೆಯದೇ ಸ್ಟೌ ಆರಿಸು. ನಾನು ಹೇರ್‌ಕಟ್‌ಗೆ ಹೋಗಿ ಬರುತ್ತೇನೆ’ ಎಂದರು. ನಾನು ಥಟ್ಟನೇ, ‘ಸಲೂನ್ ಇಲ್ಲೇ ಹತ್ತಿರ ಅಲ್ವಾ, ಅಲ್ದೇ ನಿಮಗೆ ಹೆಚ್ಚು ಹೊತ್ತು ಏನೂ ಬೇಡ, ಈ ಕಿವಿ ಮೇಲೆ ನಾಲ್ಕು, ಆ ಕಿವಿ ಮೇಲೆ ನಾಲ್ಕು ಕೂದಲು ಕತ್ತರಿಸಿದರೆ ಸಾಕಲ್ವಾ, ಎರಡು ನಿಮಿಷದ ಕೆಲಸ, ನೀವೇ ಬಂದು ಸ್ಟೌ ಆರಿಸಬಹುದು’ ಎಂದುಬಿಟ್ಟೆ. ಅಂದು ನಾಲಿಗೆ ಕಚ್ಚಿಕೊಂಡಿದ್ದಾಯಿತು. ಆದರೇನು ಮಾಡುವುದು, ಆಗೋ ಅನಾಹುತ ಆಗಿ ಹೋಗಿತ್ತು. ನನ್ನ ಒಂಚೂರು ಬಾಂಡ್ಲಿ ಗಂಡನ ಮುಖ ಧುಮು ಧುಮು ಉರಿಯತೊಡಗಿತು. ‘ಹೂಂ, ನನಗೆ ತಲೇಲಿ ಕೂದಲು ಕಮ್ಮಿ ಅಂತ ಅಣಕಿಸುತ್ತಿದ್ದೀಯ, ಇರ್ಲಿ ಬಿಡು, ನಿಂಗೂ ಕೂದಲು ಉದುರುವುದಕ್ಕೆ ಶುರು ಆಗ್ಲೀ, ಆಗ ನಿನಗೆ ನನ್ನ ಕಷ್ಟ ಏನೂ ಅಂತ ಗೊತ್ತಾಗುತ್ತೆ’ ಅಂತ ಹೇಳಿ ಮುನಿಸಿಕೊಂಡು ಒಂದು ವಾರದವರೆಗೂ ಮಾತನಾಡಿಸಿದರೂ ಮಾತನಾಡದೆ ಕಾಡಿಸಿದರು.

ಇವರು ನನ್ನ ನೋಡಲು ಬಂದಾಗಲೂ ನನ್ನ ಗಮನ ಇವರ ಕಡೆಗೆ ಹೋಗಿರಲಿಲ್ಲ. ಹೆಣ್ಣು ನೋಡಲು ಬಂದಾಗ ತನ್ನ ಮೂವರು ಸ್ನೇಹಿತರೊಂದಿಗೆ ಬಂದಿದ್ದ ಇವರು ನಮ್ಮ ಎದುರು ಮನೆಯಲ್ಲಿ ಕುಳಿತಿದ್ದರು. ನಮ್ಮ ಎದುರು ಮನೆ ಆಂಟಿ ಬಂದು ನನ್ನನ್ನು ಕರೆದುಕೊಂಡು ಹೋದರು. ಮನೆ ಒಳ ಹೋಗುವಾಗ ಹಾಗೆ ಸುಮ್ಮನೆ ಕುಳಿತಿದ್ದವರ ಕಡೆ ಒಂದರೆ ಕ್ಷಣ ನೋಡಿ ಒಳ ಹೋದೆ. ತಲೆ ತುಂಬಾ ತಲೆಗೂದಲಿದ್ದ ಇವರ ಸ್ನೇಹಿತನನ್ನ ಮದುವೆ ಗಂಡು ಅಂದುಕೊಂಡು ಒಳಹೋದ ಮೇಲೆ ಆಂಟಿಗೆ, ‘ಆಂಟೀ ಹುಡುಗ ತುಂಬಾ ಚೆನ್ನಾಗಿ ಇದ್ದಾನೆ, ನನ್ನ ಒಪ್ಪೋದು ಕಷ್ಟ ಬಿಡಿ’ ಎಂದೆ. ಆಂಟಿ ಆಶ್ಚರ್ಯದಿಂದ ‘ಯಾರನ್ನ ಹುಡುಗ ಅಂದುಕೊಂಡಿದ್ದೀಯ?’ ಎಂದಾಗ, ಅಡುಗೆ ಮನೆಯಿಂದಲೇ ಕೈ ತೋರಿಸುತ್ತಾ, ‘ಅವರಲ್ಲವ’ ಎಂದೆ. ಆಂಟಿ ನಕ್ಕು, ‘ಅಯ್ಯೋ ಅವನಲ್ಲ ಕಣೆ, ಪಕ್ಕದಲ್ಲಿ ಸ್ವಲ್ಪ ಬಾಂಡ್ಲಿ ಕೂತಿದೆಯಲ್ಲ ಅವನು’ ಎಂದು ಸುಲಭವಾಗಿ ಗುರುತು ಹಿಡಿಯಲು ಸಹಾಯ ಮಾಡಿಬಿಟ್ಟರು.

ನಂತರ ಎಲ್ಲಾ ಕೂಡಿ ಬಂದು ಮದುವೆಯೂ ಆಯಿತು.

ಮದುವೆಯ ವಿಡಿಯೊ ಬಂದ ಬಳಿಕ, ಇಬ್ಬರೂ ಕುಳಿತು ನೋಡುವಾಗ ನನ್ನ ಗಮನವೆಲ್ಲಾ ಮದುವೆಗೆ ಬಂದಿದ್ದವರು ಯಾರು ಯಾರು ಅನ್ನೋದರ ಕಡೆಗೆ ಇದ್ದರೆ, ಇವರು ಮಾತ್ರ, ‘ಛೆ, ನನ್ ಮಗಂದು ತಲೇಲಿ ಇನ್ನೊಂದ್ ಚೂರು ಕೂದಲಿದ್ದಿದ್ದರೆ ಆ ಕಳೆಯೇ ಬೇರೆ’ ಅಂತ ವಿಡಿಯೋ ಮುಗಿಯುವವರೆಗೂ ಹಂಬಲಿಸಿದರು. ಇವರಂತೂ ತಮ್ಮ ತಲೆಯನ್ನು ಯಾರೂ ಮುಟ್ಟಲು ಬಿಡುವುದಿಲ್ಲ. ಎಲ್ಲಾ ಹುಡುಗಿಯರಿಗೂ ಇರುವ ಆಸೆಯಂತೆ, ಏಕಾಂತದಲ್ಲಿರುವಾಗ ರೊಮ್ಯಾಂಟಿಕ್ ಆಗಿ ಇವರ ತಲೆಗೂದಲಲ್ಲಿ ಬೆರಳಾಡಿಸುವ ನನ್ನ ಆಸೆ ಎಂದೂ ಈಡೇರಲಿಲ್ಲ. ‘ಲೇ ಇರೋ ನಾಲ್ಕು ಕೂದಲು ಜೋಪಾನವಾಗಿ ಇಟ್ಕೋ ಬೇಕು, ಕಿತ್ತು ಗಿತ್ತು ಹಾಕಿಬಿಟ್ಟೀಯಾ, ನನ್ ತಲೆ ತಂಟೆಗೆ ಬರಬೇಡ’ ಅಂತ ಖಡಾಖಂಡಿತವಾಗಿ ಹೇಳಿ ನನ್ನಾಸೆಗೆ ತಣ್ಣೀರೆರಚಿ ಬಿಟ್ಟರು.



ಅವರು ಹೇಳುವುದು ನಿಜ. ಮನುಷ್ಯರಿಗೆ ಮುಖ ಲಕ್ಷಣ ಹೆಚ್ಚಿಸುವುದು ತಲೆಕೂದಲು ತಾನೇ. ನೋಡಲು ಎಷ್ಟೇ ಚೆನ್ನಾಗಿದ್ದರೂ ತಲೆಯಲ್ಲಿ ಕೂದಲು ಕಮ್ಮಿಯಿದ್ದರೆ ಸ್ವಲ್ಪ ಕಳೆ ಕಮ್ಮಿಯೇ. ಹೆಂಗಸರು ಮತ್ತು ಗಂಡಸರ ದೇಹದ ಹಾರ್ಮೋನ್‌ಗಳು ಕೆಲವು ಬೇರೆ ಬೇರೆ. ಅದರಲ್ಲಿ ತಲೆಗೂದಲ